ಮನೋಭಾವದಿಂದಲ್ಲ. "ನಾವು ಮಾಡುವ ಕರ್ಮದಿಂದ ನಮಗೇ ಒಳಿತು, ಪರರಿಗಲ್ಲ" ಎಂಬ ಸ್ವಾಮಿ ವಿವೇಕಾನಂದರ ಮಾತನ್ನು ನಾವು ಇಲ್ಲಿ ನೆನಪಿಸಿಕೊಳ್ಳಬೇಕು.

ಸೇವೆಯಂತೆ ಮಾಡಿದ ಕರ್ಮ ಪೂಜೆಗೆ ಸಮ. ನರೇಂದ್ರ, ಶರತ್ ಮತ್ತಿತರ ಯುವಭಕ್ತರು ದಕ್ಷಿಣೇಶ್ವರದ ಶ್ರೀರಾಮಕೃಷ್ಣರ ಕೊಠಡಿಯಲ್ಲಿ ನೆರೆದಿದ್ದಾರೆ. ಶ್ರೀರಾಮಕೃಷ್ಣರು ವೈಷ್ಣವಧರ್ಮದ ಸಾರತತ್ತ್ವವನ್ನು ಸಂಕ್ಷೇಪವಾಗಿ ವಿವರಿಸುತ್ತಿದ್ದಾರೆ, "ನಾಮದಲ್ಲಿ ರುಚಿ, ಜೀವಿಗಳಲ್ಲಿ ದಯೆ ತೋರಿಸುವುದು ಮತ್ತು ವೈಷ್ಣವರ ಸೇವೆ ಮಾಡುವುದು" ಎಂದು. 'ಸರ್ವ ಜೀವಿಗಳ ಮೇಲೆ ದಯೆ' ಎಂದು ಹೇಳುತ್ತಾ ಶ್ರೀರಾಮಕೃಷ್ಣರು ಸಮಾಧಿಸ್ಥರಾಗಿಬಿಟ್ಟರು. ಸ್ವಲ್ಪ ಹೊತ್ತಿನ ನಂತರ ಭಾವಾವಿಷ್ಟರಾಗಿ, "ಜೀವಿಗಳ ಮೇಲೆ ದಯೆ ತೋರಿಸುವುದೆ? ಜೀವಿಗಳ ಮೇಲೆ ದಯೆ ತೋರಿಸಲು ನೀನಾರು? ಇಲ್ಲ, ಇಲ್ಲ. ಜೀವಿಗಳ ಮೇಲೆ ದಯೆ ಅಲ್ಲ, ಶಿವಜ್ಞಾನದ ಮೂಲಕ ಜೀವರ ಸೇವೆ!" ಎಂದರು.

ಈ ಮಾತುಗಳನ್ನು ಆಲಿಸಿದ ನರೇಂದ್ರನಾಥನು ಕೊಠಡಿಯಿಂದ ಹೊರಬಂದ ಮೇಲೆ ಈ ರೀತಿಯಾಗಿ ಹೇಳಿದ: "ಇಂದು ಶ್ರೀರಾಮಕೃಷ್ಣರ ಮಾತಿನಲ್ಲಿ ಎಂಥ ಅದ್ಭುತ ಬೆಳಕನ್ನು ಕಂಡೆ! ಶುಷ್ಕ, ಕಠೋರ, ಪ್ರೇಮರಹಿತವೆಂದು ಪ್ರಸಿದ್ಧವಾಗಿರುವ ವೇದಾಂತ ಜ್ಞಾನವನ್ನು ಭಕ್ತಿಯೊಡನೆ ಒಂದುಗೂಡಿಸಿ ಎಂಥ ಸರಳವೂ ಮಧುರವೂ ಆದ ವ್ಯಾಖ್ಯಾನವನ್ನು ನೀಡಿದರು! ಅದ್ವೈತಜ್ಞಾನವನ್ನು ಪಡೆದರೆ ಸಂಸಾರ ಮತ್ತು ಪ್ರಪಂಚದ ಸಂಗವನ್ನು ತ್ಯಜಿಸಿ ಕಾಡಿಗೆ ಹೋಗಬೇಕು ಮತ್ತು ಭಕ್ತಿ, ಪ್ರೀತಿ ಮುಂತಾದ ಕೋಮಲ ಭಾವಗಳನ್ನು ಹೃದಯದಿಂದ ಸಂಪೂರ್ಣ ಕಿತ್ತೆಸೆಯಬೇಕು – ಈ ಮಾತನ್ನು ಇಷ್ಟು ದಿನವೂ ಕೇಳುತ್ತಾ ಬಂದಿದ್ದೇವೆ. ಇದರ ಪರಿಣಾಮವಾಗಿ ಜಗತ್ತು ಮತ್ತು ಅದರಲ್ಲಿರುವ ಪ್ರತಿಯೊಬ್ಬ ವ್ಯಕ್ತಿಯನ್ನೂ ಧರ್ಮಮಾರ್ಗಕ್ಕಿರುವ ಅಡಚಣೆಗಳೆಂದು ಭಾವಿಸಿ, ಅವರ ಬಗ್ಗೆ ತಿರಸ್ಕಾರ ಭಾವನೆ ಉಂಟಾಗಿ, ಅದೇ ಸಾಧಕನಿಗೆ ಹಾನಿಯುಂಟುಮಾಡುತ್ತದೆ. ಆದರೆ ಇಂದು ಶ್ರೀರಾಮಕೃಷ್ಣರ ಮಾತಿನಿಂದ ತಿಳಿದುಬರುವುದೇನೆಂದರೆ ವನದ ವೇದಾಂತವನ್ನು ಮನೆಗೆ ತರಬೇಕು ಎಂದು. ಸಂಸಾರದ ಪ್ರತಿಯೊಂದು ಕೆಲಸದಲ್ಲಿಯೂ ಅದನ್ನು ಅವಲಂಬಿಸುವಂತೆ ಮಾಡಬೇಕು. ಮಾನವನು ಈಗ ಏನೇನು ಮಾಡುತ್ತಿರುವನೋ ಅದನ್ನೇ ಮಾಡಲಿ, ಅದರಲ್ಲಿ ಹಾನಿಯಿಲ್ಲ. ಆದರೆ ಅವನು ತನ್ನ ಹೃದಯಾಂತರಾಳದಲ್ಲಿ ಈ ವಿಶ್ವಾಸವನ್ನು ಇಟ್ಟುಕೊಂಡಿರಬೇಕು: ಈಶ್ವರನೇ ಜೀವಜಗತ್ತಿನ ರೂಪದಲ್ಲಿ ತನ್ನ ಮುಂದೆ ಪ್ರಕಾಶಿಸುತ್ತಿರುವನು, ಜೀವನದ ಪ್ರತಿ ಮುಹೂರ್ತದಲ್ಲಿಯೂ ಅವನು ಯಾರನ್ನು ಸಂಪರ್ಕಿಸುತ್ತಾನೊ, ಯಾರನ್ನು ಪ್ರೀತಿಸುತ್ತಾನೊ, ಯಾರಿಗೆ ಶ್ರದ್ಧೆ, ದಯೆ, ಗೌರವ ತೋರಿಸುತ್ತಾನೆಯೊ ಅವರೆಲ್ಲರೂ ಭಗವಂತನ ಅಂಶ. ಪ್ರಪಂಚದಲ್ಲಿರುವ ಎಲ್ಲಾ ವ್ಯಕ್ತಿಗಳನ್ನೂ ಈ ರೀತಿ ಶಿವಜ್ಞಾನದಿಂದ ನೋಡಲು ಸಾಧ್ಯವಾದರೆ, ತನ್ನನ್ನು ಒಬ್ಬ ದೊಡ್ಡ ವ್ಯಕ್ತಿಯೆಂದು ಪರಿಗಣಿಸುತ್ತ, ಇತರರ ವಿಷಯದಲ್ಲಿ ರಾಗ, ದ್ವೇಷ, ಜಂಭ ಅಥವಾ ದಯೆ ಇವುಗಳನ್ನು ವ್ಯಕ್ತಪಡಿಸಲು ಅವನಿಗೆ ಅವಕಾಶವೆಲ್ಲಿ? ಈ ರೀತಿ ಶಿವಜ್ಞಾನದಿಂದ ಜೀವಿಗಳ ಸೇವೆ ಮಾಡುತ್ತಾ ಚಿತ್ತಶುದ್ಧಿ ಉಂಟಾಗುತ್ತದೆ. ಸ್ವಲ್ಪಕಾಲದಲ್ಲಿಯೆ ತನ್ನನ್ನು ಚಿದಾನಂದಮಯ ಭಗವಂತನ ಅಂಶ – ಶುದ್ಧ, ಬುದ್ಧ, ಮುಕ್ತ ಸ್ವಭಾವದವನು ಎಂದು ಅರಿಯಲು ಸಾಧ್ಯವಾಗುತ್ತದೆ." ನರೇಂದ್ರನಾಥನು ಈ ಮಾತನ್ನು ಮುಂದುವರೆಸುತ್ತಾ ಹೀಗೆ ಘೋಷಿಸುತ್ತಾನೆ: "ಏನೇ ಆಗಲಿ, ಭಗವಂತನು ನನಗೆ ಅವಕಾಶ ಮಾಡಿಕೊಟ್ಟಿದ್ದೇ ಆದರೆ ಇಂದು ನಾನು ಏನು ಕೇಳಿದೆನೋ, ಈ ಅದ್ಭುತ ಸತ್ಯವನ್ನು ಪ್ರಪಂಚದ ಎಲ್ಲೆಡೆ ಪ್ರಚಾರ ಮಾಡುತ್ತೇನೆ. ಪಂಡಿತ, ಮೂರ್ಖ, ಶ್ರೀಮಂತ, ದರಿದ್ರ, ಬ್ರಾಹ್ಮಣ, ಚಂಡಾಲ – ಎಲ್ಲರೂ ಇದನ್ನು ಕೇಳಿ ಮಂತ್ರಮುಗ್ಧರಾಗುವಂತೆ ಮಾಡುತ್ತೇನೆ."

ಈ ಅದ್ಭುತ ಸತ್ಯದ ಬಗ್ಗೆ ಎಲ್ಲರೂ ಚಿಂತಿಸಬೇಕು. ಜ್ಞಾನ, ಭಕ್ತಿ, ಕರ್ಮ– ಯಾವುದೇ ಮಾರ್ಗವನ್ನು ಅನುಸರಿಸಿದರೂ ಇದು ಅತ್ಯಂತ ಪ್ರಯೋಜನಕಾರಿ. ದೇಹಧಾರಿಯಾದವನು ಕರ್ಮ ಮಾಡದೆ ಒಂದು ಕ್ಷಣವೂ ಇರಲಾರ. ಹಾಗಿರುವಾಗ ಶಿವಜ್ಞಾನದ ಮೂಲಕ ಜೀವಸೇವೆಯ ರೂಪದ ಕರ್ಮಾನುಷ್ಠಾನ ಮಾಡುವುದು ನಮ್ಮ ಕರ್ತವ್ಯ. ಹೀಗೆ ಮಾಡುವುದರಿಂದಲೇ ಒಬ್ಬ ವ್ಯಕ್ತಿ ಬೇಗ ತನ್ನ ಗುರಿಯನ್ನು ಮುಟ್ಟುತ್ತಾನೆ. ಜೀವಿಯಲ್ಲಿ ಶಿವನನ್ನು ಕಾಣುವಂತಹ ಕರ್ಮಯೋಗಿಗೆ ಮೇಲು ಕೀಳೆಂಬ ಅಹಂಕಾರ ಭಾವನೆ ಮತ್ತು 'ನಾನು ನನ್ನದು' ಎಂಬ ಕರ್ತೃತ್ವ ಭೋಕ್ತೃತ್ವ ಭಾವನೆಗಳು ಉಂಟಾಗುವ ಸಂಭವವಿರುವುದಿಲ್ಲ. ಇದರಿಂದ ಅವನು ಶೀಘ್ರಗತಿಯಲ್ಲಿ ತನ್ನ ಆಧ್ಯಾತ್ಮಿಕ ಗುರಿಯನ್ನು ಮುಟ್ಟಲು ಸಾಧ್ಯವಾಗುತ್ತದೆ.

ಎಲ್ಲಿಯವರೆಗೆ ಸರ್ವಭೂತಗಳಲ್ಲಿಯೂ ಭಗವಂತನನ್ನು ಕಾಣಲಾಗುವುದಿಲ್ಲವೋ ಅಲ್ಲಿಯವರೆಗೆ ಪರಾಭಕ್ತಿಯನ್ನು ಪಡೆಯುವುದು ಸಾಧಕನಿಗೆ ಬಹುದೂರದ ಮಾತು. ತನ್ನ ಇಷ್ಟವನ್ನೇ ಎಲ್ಲರಲ್ಲೂ ಕಂಡು, ಆ ಭಾವನೆಯಿಂದ ಸೇವೆಯನ್ನು ಮಾಡಿದಲ್ಲಿ ಅವನು ಬೇಗನೆ ಯಥಾರ್ಥಭಕ್ತಿಯನ್ನು ಪಡೆದು ಕೃತಾರ್ಥನಾಗುತ್ತಾನೆ. **'ಈಶಾವಾಸ್ಯಮಿದಂ ಸರ್ವಂ'** ಎನ್ನುವಂತೆ ಎಲ್ಲೆಲ್ಲೂ ಭಗವಂತನನ್ನೇ, ಆತ್ಮವನ್ನೇ ಕಂಡಲ್ಲಿ ಜ್ಞಾನಿಗೆ ಮುಕ್ತಿಯು ಕಟ್ಟಿಟ್ಟ ಬುತ್ತಿ. ಇದನ್ನೇ 'ಜೀವನಲ್ಲಿ ಶಿವನನ್ನು ಕಂಡು ಸೇವಿಸು' (ಶಿವಜ್ಞಾನೇ ಜೀವಸೇವಾ) ಎಂದು ಶ್ರೀರಾಮಕೃಷ್ಣರು ಉಪದೇಶಿಸಿದರು. ಇದು ಅನುಷ್ಠಾನವೇದಾಂತದ ತಳಪಾಯವೂ ಹೌದು. ಜೀವಿಯಲ್ಲಿ ಶಿವನನ್ನು, ಭಗವಂತನನ್ನು ಕಂಡು ಸೇವಿಸುವುದರಿಂದ ನಾವು ಚಿತ್ತಶುದ್ಧಿಯನ್ನು ಪಡೆದು, ಸಾಯುಜ್ಯವನ್ನು ಪಡೆಯುತ್ತೇವೆ. ಪ್ರಪಂಚದಲ್ಲಿದ್ದುಕೊಂಡೇ ವೇದಾಂತದ ಚರಮಸಂದೇಶವನ್ನು ಅನುಷ್ಠಾನಗೊಳಿಸಲು ಇದೊಂದು ಉತ್ತಮ ಅವಕಾಶ. ಸಾಮಾನ್ಯಜನರು, ಸಮಾಜ ಸೇವಕರು, ರಾಜಕಾರಣಿಗಳು ಈ ಉಪದೇಶವನ್ನು ಅನುಷ್ಠಾನಕ್ಕೆ ತಂದಲ್ಲಿ ಬಡತನ, ಅನಕ್ಷರತೆ, ಇತ್ಯಾದಿ ಸಮಸ್ಯೆಗಳನ್ನು ದಕ್ಷತೆಯಿಂದ ನಿರ್ಮೂಲನೆ ಮಾಡಬಹುದು. ಆ ಮೂಲಕ ಭಾರತದೇಶವು ಮತ್ತೊಮ್ಮೆ ತನ್ನ ಉಚ್ಛ್ರಾಯ ಸ್ಥಿತಿಯನ್ನು ತಲುಪಬಹುದು.